1889



೫೫೭

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯುಕ್ತ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 22, ಸ್ ೧೯೦೪.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮೈಸೂರಿನವರು ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

1904ನೆ ಇಸವಿ ಜುಲೈ 15ನೆ ಮಾರ್ಕ್ಕಂ R. 129—30—26—4ನೆ ನಂಬರ್ ಗವರ್ನ್‌ಮೆಂಟ್ ಆರ್ಡರ್ ಅನುಸರಿಸಿ ಕೊಡೋಣಾದ ಇಸ್ತಿಹಾರ್‌ನಾಮೆ:—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಫಾರೆಸ್ಟ್ ರೇಂಜಿಗೆ ಸೇರಿದ ಸ್ಟೇಟ್ ಫಾರೆಸ್ಟ್‌ಗಳಲ್ಲಿ ಈ ಕೆಳಗೆ ವಿವರಿಸುವ ಮೇರೆ ದಾರಿಗಳು ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟವೆ.

I ಸಾವನದುರ್ಗ ಫಾರೆಸ್ಟ್—ಮಾಗಡಿ ತಾಲ್ಲೂಕು.

(ಎ) ಸಾವ್ಯದುರ್ಗ ಬ್ಲಾಕ್.

(1) ನಾಯಕನ ಪಾಳ್ಯದಿಂದ ತಗಚೆಗುಪ್ಪೆಗೆ ಹೋಗುವ ಕಾಲುದಾರಿ.—ಇದು 2 ಗಜ ಅಗಲವೂ ಮತ್ತು 3 ಮೈಲಿ ಉದ್ದವೂ ಇರುತ್ತದೆ. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ನಾಯಕನ ಪಾಳ್ಯದ 22ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಎಲ್ಲೆಕಟ್ಟಿನಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮತ್ತು ಈಶಾನ್ಯಮಾರ್ಗವಾಗಿ ಹೋಗಿ, ಡಿಮಾರ್ಕೇಷನ್ ಲೈನಿನ 5ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಬಾಚನಹಟ್ಟಿಯ 13ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದ ಎಲ್ಲೆಯನ್ನು ಪ್ರವೇಶಿಸುತ್ತದೆ.

(2) ಗುಡ್ಡಹಳ್ಳಿಯಿಂದ ನೆಲಪಟ್ಟಣಕ್ಕೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು 1½ ಮೈಲಿ ಉದ್ದವೂ ಇರುತ್ತದೆ. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಗುಡ್ಡಹಳ್ಳಿಯ 33ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ಹೋಗಿ, ನೆಲಪಟ್ಟದ 2ನೆ ಸರ್ವೆ ನಂ. ಪಶ್ಚಿಮ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(3) ಕಲ್ಯಾಣದೇವರ ಮಟದಿಂದ ನೆಲಪಟ್ಟಣಕ್ಕೆ ಹೋಗುವ ಬಂಡೀದಾರಿ.—ಇದು 4 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 22ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 2ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯಮಾರ್ಗವಾಗಿ ಹೋಗಿ ನೆಲಪಟ್ಟಣದ 1ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(4) ಕಲ್ಯಾಣದೇವರ ಮಟದಿಂದ ಡುಬ್ಬಗುಳಿಗೆ ಹೋಗುವ ಕಾಲು ದಾರಿ.—2 ಗಜ ಅಗಲವೂ ಮತ್ತು $1\frac{1}{4}$ ಮೈಲಿ ಉದ್ದವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 21ನೆ ಮೈಲಿಯ 8ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 7ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮತ್ತು ಈಶಾನ್ಯ ಮಾರ್ಗವಾಗಿ ಹೋಗಿ, ಡಿಮಾರ್ಕೇರ್ಷ್ ಲೈನಿನ 10ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಡುಬ್ಬಗುಳಿಯ 35ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(5) ಮಟದಿಂದ ಮಂಚನೆಬೆಲೆಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 3 ಮೈಲಿ ಉದ್ದ ವುಳ್ಳದ್ದು. ಇದು ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 20ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಮಟದ 17ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯ ಮಾರ್ಗವಾಗಿ ಹೋಗಿ, ಡಿಮಾರ್ಕೇರ್ಷ್ ಲೈನಿನ 19ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಂಚನಬೆಲೆ ಗ್ರಾಮದ 70ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಮಟದಿಂದ ಥೂಪಕಲೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು 2 ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 18ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಟದ 3ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯ ಮಾರ್ಗವಾಗಿ ಹೋಗಿ ಥೂಪಕಲೆಯಲ್ಲಿ ಮೇಲೆ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಕೇರಿ ಫಾರೆಸ್ಟಿನಲ್ಲೆ ಐದಾಗುತ್ತದೆ.

(7) ಡುಬ್ಬಗುಳಿಯಿಂದ ಸಂಕೇನಹಳ್ಳಿ ಜೈಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 12ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಡುಬ್ಬಗುಳಿಯ 11ನೆ ಸರ್ವೆ ನಂಬರಿನ ಪಶ್ಚಿಮ ಎಲ್ಲೆಯಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, ಸಂಕೇನಹಳ್ಳಿ ಜೈಲಿನಲ್ಲಿ ಮೇಲ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಕೇರಿ ಫಾರೆಸ್ಟಿನಲ್ಲೇ ಐದಾಗುತ್ತದೆ.

(8) ಅಡಿಕೆಮಾರನಹಳ್ಳಿಯಿಂದ ನೆಲಪಟ್ಟಣಕ್ಕೆ ಹೋಗುವ ಕಾಲು ದಾರಿ.—2 ಗಜ ಅಗಲವೂ 2 ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 7ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ 27ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, 12ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ನೆಲಪಟ್ಟಣವನ್ನು ಪ್ರವೇಶಿಸುತ್ತದೆ.

(9) ವೀರಾಪುರದಿಂದ ನೆಲಪಟ್ಟಣಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{2}$ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 19ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ವೀರಾಪುರದ 15ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, ಮೇಲೆ ಹೇಳಿದ 8ನೆ ನಂಬರಿನ ಕಾಲುದಾರಿಯನ್ನು ಕೇರಿ ಐದಾಗುತ್ತದೆ.

(10) ಜೋಡಿಕಟ್ಟೆಯಿಂದ ನಾಯಿಕನ ಪಾಳ್ಯಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 3 ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇರ್ಷ್ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಕರ್ಣಮಂಗಲ ಗ್ರಾಮದ 102ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮಾರ್ಗವಾಗಿ ಹೋಗಿ, 2ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಅಂಜೆಗುಪ್ಪೆ ಗ್ರಾಮದ 13ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(11) ಕ್ವೀನ್ಸ್‌ಪೇಟೆಯಿಂದ ಪಡಗಡಿಗೆ ಹೋಗುವ ಹೈರೋಡು.—ಇದು ರೋಡಿನ 17ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಡಿಮಾರ್ಕೇರ್ಷ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ವಾಯುವ್ಯ ಮಾರ್ಗವಾಗಿ ಸುಮಾರು 1 ಮೈಲಿಯ ವರೆಗೆ ಹೋಗಿ, ರೋಡಿನ 18ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಮತ್ತು ಡಿಮಾರ್ಕೇರ್ಷ್ ಲೈನಿನ 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ. ಇದು ಸಾರ್ವಜನಿಕ ರಸ್ತೆಯಾಗಿದ್ದು, ಜನರಿಗೂ ಮತ್ತು ವ್ಯಾಪಾರಕ್ಕೂ ಬಿಡಲ್ಪಟ್ಟಿದೆ. ಇದು 18 ಅಡಿ ಅಗಲವಾಗಿದೆ.

ಜಲಾಶಯಗಳು.

(ಎ) ಬಿದರಕಟ್ಟೆ.—ಇದು ನೆಲಪಟ್ಟಣದಿಂದ ಸುಮಾರು $1\frac{1}{2}$ ಫರ್ಲಾಂಗುಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟಿನಲ್ಲಿ ಇದೆ. ಮತ್ತು ಇದರ ನೀರು ನೆಲಪಟ್ಟಣ, ಕಲ್ಯಾಣದೇವರ ಮಟ, ನಾಯಕನಪಾಳ್ಯ ಮತ್ತು ವೀರೇಗೌಡನದೊಡ್ಡಿ ಗ್ರಾಮಗಳ ಜಾನುವಾರುಗಳಿಗೂ ಮತ್ತು ನೆಲಪಟ್ಟಣದಲ್ಲಿರುವ ನರಸಿಂಹ್ಮದೇವರಸ್ವಾಮಿ ಮತ್ತು ವೀರಭದ್ರಸ್ವಾಮಿ ದೇವಸ್ಥಾನಗಳಿಗೆ ಹೋಗುವ ಯಾತ್ರಿಕರ ಜಾನುವಾರುಗಳಿಂದಲೂ ಉಪಯೋಗಿಸಲ್ಪಡುತ್ತದೆ.

(ಬಿ) ಸಂಕೋನಹಳ್ಳಿ ಬೈಲುಕಟ್ಟೆ.—ಇದು ಡಿವಾರ್ಕೇರ್ಷ್ ಲೈನಿನಿಂದ ಸುಮಾರು 1½ ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರು ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

(ಸಿ) ಚನ್ನೈಯ್ಯನ ಕಟ್ಟೆ.—ಇದು ಡಿವಾರ್ಕೇರ್ಷ್ ಲೈನಿನಿಂದ 1 ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಮತ್ತು ಇದರ ನೀರು ಕಲ್ಯಾಣದೇವರಮಟ್ಟ, ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

1891

ಫಾರೆಸ್ಟಿನಲ್ಲಿ ಸೇರಿರುವ ಗ್ರಾಮಗಳು.

(1) ನೆಲಪಟ್ಟಣ.—ಫಾರೆಸ್ಟಿನಲ್ಲಿದೆ. ಇದರ ಸುತ್ತಲೂ 7 ಗಜ ಅಗಲವುಳ್ಳ ಡಿವಾರ್ಕೇರ್ಷ್ ಲೈನು ಇದೆ. ಇದು ರಿಜು ವೇರ್ಷನಿಂದ ರಹಿತವಾದದ್ದು.

(ಬಿ) ಸಿದ್ದೇದೇವರ ಬೆಟ್ಟ ಬ್ಲಾಕ್.

(1) ನಾಗಮಂಗಲದಿಂದ ಅಜ್ಜನಹಳ್ಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 28ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ನಾಗಮಂಗಲ ಗ್ರಾಮದ 28ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇರ್ಷ್ ಲೈನಿನ 7ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಅಜ್ಜನಹಳ್ಳಿ ಗ್ರಾಮದ 32ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಅಣ್ಣೀಕಾರನಹಳ್ಳಿಯಿಂದ, (ಅಜ್ಜನಹಳ್ಳಿ ದಾಖಲೆ) ಹೊಸದೊಡ್ಡಿಗೆ ಹೋಗುವ ಬಂಡೀ ದಾರಿ.—ಸುಮಾರು 4 ಗಜ ಅಗಲವು ½ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 3ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಅಣ್ಣೀಕಾರನಹಳ್ಳಿಯ 32ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇರ್ಷ್ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ ಸರ್ವೆ ನಂ. 61ನೇದರ ಉತ್ತರ ಪಾರ್ಶ್ವವನ್ನು ಸೇರುತ್ತದೆ.

(3) ಮೇಗಳ ದೊಡ್ಡಿ (ಅತ್ತಿಂಗೆರೆ ದಾಖಲೆ)ಯಿಂದ ಹೊಸದೊಡ್ಡಿ (ಅಜ್ಜನಹಳ್ಳಿ ದಾಖಲೆ) ಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ½ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 4ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಅತ್ತಿಂಗೆರೆಯ 66ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, ಡಿವಾರ್ಕೇರ್ಷ್ ಲೈನಿನ 5ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ 49ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(4) ಕಾಯಂಗುತ್ತಾ ಗುದ್ದಲಹಳ್ಳಿಯಿಂದ ಮಾಡಬಾಳಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 8ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ, 15ನೆ ಮೈಲಿಯ 4ನೆ ಫರ್ಲಾಂಗಿನ ಬಳಿ ಫಾರೆಸ್ಟನ್ನು ಬಿಟ್ಟು ಮಾಡಬಾಳದ 41ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(5) ಕಾಯಂಗುತ್ತಾ ಗುದ್ದಲಹಳ್ಳಿಯಿಂದ ಲಕ್ಕಸಂದ್ರಕ್ಕೆ ಹೋಗುವ ಕಾಲು ದಾರಿ. 2 ಗಜ ಅಗಲವೂ ¾ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 8ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, 10ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಲಕ್ಕಸಂದ್ರದ 32ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಕಂಭುದೇವನಹಳ್ಳಿಯಿಂದ ಅಜ್ಜನಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 16ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ಮಾಡುಬಾಳುಗ್ರಾಮದ 38ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣವಾಗಿ ಹೋಗಿ, ಸಟ್ಟೆಕಟ್ಟೆಯಬಳಿ ಮೇಲೆ ಹೇಳಿದ 1ನೆ ನಂ. ಬಂಡಿದಾರಿಯಲ್ಲಿ ಐದಾಗುತ್ತದೆ.

(7) ಮಾಡುಬಾಳದಿಂದ ನಾಗಮಂಗಲಕ್ಕೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 6 ಫರ್ಲಾಂಗು ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ್ ಲೈನಿನ 17ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಮಾಡುಬಾಳಗ್ರಾಮದ 38ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯ ಮಾರ್ಗವಾಗಿ ಹೋಗಿ, 19ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ನಾಗಮಂಗಲಗ್ರಾಮದ 59ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

ಜಲಾಶಯಗಳು.

(1) ಸಟ್ಟೆಕಟ್ಟೆ.—ಇದು ಮೇಲೆ 6ನೆ ನಂಬರಿನಲ್ಲಿ ವಿವರಿಸಿದಂತೆ ಸ್ಟೇಟ್ ಫಾರೆಸ್ಟಿನಲ್ಲಿದೆ. ಇದರ ನೀರು ಕಂಭುದೇವನ ಹಳ್ಳಿ, ಅಜ್ಜನಹಳ್ಳಿ, ನಾಗಮಂಗಲ ಮತ್ತು ಮಾಡುಬಾಳುಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

II ಚಿಕ್ಕ ಮಂಣ್ಣಗುಡ್ಡಿ (ಕೊಲ್ಲೇಸಪೇಟೆ ಸಬ್ ತಾಲ್ಲೂಕು).

(1) ಮಂಜೆಟಹಳ್ಳಿಯಿಂದ ವಿಭೂತಿಕೆರೆ ದಾಖಲೆ ದೇವರದೊಡ್ಡಿಗೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 1½ ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ, ವಿಭೂತಿಕೆರೆ ದಾಖಲೆ ಮಂಜೆಟಹಳ್ಳಿಯ 348ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯವಾಗಿ ಹೋಗಿ, 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ವಿಭೂತಿಕೆರೆ ದಾಖಲೆ ದೇವರದೊಡ್ಡಿಯ 101ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವವನ್ನು ಪ್ರವೇಶಿಸುತ್ತದೆ.

III ದೊಡ್ಡ ಮಂಣ್ಣಗುಡ್ಡಿ (ಕೊಲ್ಲೇಸಪೇಟೆ ಸಬ್ ತಾಲ್ಲೂಕು).

(1) ಕೊಲ್ಲೇಸಪೇಟೆ ಚನ್ನಪಟ್ಟಣ ರಸ್ತೆಯಲ್ಲಿರುವ ಚನ್ನಪಟ್ಟಣದ ಕೆಂಗಲ್‌ರಾಯ ಹನುಮಂತದೇವರ ದೇವಸ್ಥಾನದ ಬಳಿಯಿಂದ ಗೊಲ್ಲರದೊಡ್ಡಿಗೆ ಹೋಗುವ ಕಾಲುದಾರಿ. 2 ಗಜ ಅಗಲವೂ ಮತ್ತು 1½ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 1ನೆ ಮೈಲಿಯ 7ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ, ವಂದಾರಗುಪ್ಪೆಗಾಮದ 20ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಉತ್ತರಮಾರ್ಗವಾಗಿ ಹೋಗಿ, 7ನೆ ಮೈಲಿಯ 3ನೆ ಫರ್ಲಾಂಗಿನ ಬಳಿ ಫಾರೆಸ್ಟನ್ನು ಬಿಟ್ಟು, ಗೊಲ್ಲರದೊಡ್ಡಿ (ಬಿಳಗುಂಬಾ ದಾಖಲೆ) ಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಗೊಲ್ಲರದೊಡ್ಡಿಯಿಂದ ದನಾಯಿಕಪುರಕ್ಕೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 5 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 6ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ (ಬಿಳಗುಂಬಾ ದಾಖಲೆ) ಗೊಲ್ಲರದೊಡ್ಡಿಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮವಾಗಿ ಹೋಗಿ, 6ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ದನಾಯಕನಪುರದ 177ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(3) ಕೊಲ್ಲೇಸಪೇಟೆಯಿಂದ ಶಾನುಭೋಗನಹಳ್ಳಿಗೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 3 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 6ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಗೊಲ್ಲರದೊಡ್ಡಿ (ಬಿಳಗುಂಬಾ ದಾಖಲೆ) ಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರಕ್ಕೆ ಹೋಗಿ, 6ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಶಾನುಭೋಗನಹಳ್ಳಿಯ 139ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವವನ್ನು ಪ್ರವೇಶಿಸುತ್ತದೆ.

IV ಮೊಕಳಿ ಫಾರೆಸ್ಟ್ (ಕೊಲ್ಲೇಸಪೇಟೆ ಸಬ್ ತಾಲ್ಲೂಕು).

(1) ಬ್ಯಾಡರಹಳ್ಳಿಯಿಂದ ಮೊಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 4 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 18ನೆ ಮೈಲಿ 6ನೆ ಫರ್ಲಾಂಗಿನಲ್ಲಿ ಬ್ಯಾಡರಹಳ್ಳಿಯ (ಕುಣಿಗಲ್ ತಾಲ್ಲೂಕು) 17ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮಾರ್ಗವಾಗಿ ಹೋಗಿ, ಮೊಕಳಿ ಗ್ರಾಮದ 180ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸುತ್ತದೆ.

(2) ವಿರುಪಸಂದ್ರದಿಂದ ಮೊಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 20ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ವಿರುಪಸಂದ್ರದ 14ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಮೊಕಳಿ ಗ್ರಾಮದ 198ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಹೊಂಬೆಗಾಷ್ಠನ ದೊಡ್ಡಿ (ವಿರುಪಸಂದ್ರ ದಾಖಲೆ) ಯಿಂದ ಮೊಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 20ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ವಿರುಪಸಂದ್ರದ 14ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಮೊಕಳಿ ಗ್ರಾಮದ 198ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ದೊಡ್ಡ ಗಂಗವಾಡಿಯಿಂದ ನಾಯಡೊಲೆ ದ್ವಾರಾ ಮೊಕಳಿಗೆ ಹೋಗುವ ಬಂಡಿದಾರಿ 4 ಗಜ ಅಗಲವೂ ಮತ್ತು 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 2ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ, 90ನೆ ಮತ್ತು 19ನೆ ಸರ್ವೆ ನಂಬರುಗಳ ಮಧ್ಯದಲ್ಲಿರುವ ಬರಾಬು ಖಣಿಯಿಂದ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯವಾಗಿ ಹೋಗಿ, 198ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಮೊಕಳಿ ಗ್ರಾಮವನ್ನು ಪ್ರವೇಶಿಸುತ್ತದೆ. ಈ ಬಂಡಿದಾರಿಯು ನಾಯಡೊಲೆಯ ಸರ್ವೆ ನಂ. 2ನೆ ದರೆ ಉತ್ತರ ಪಾರ್ಶ್ವದಲ್ಲಿ ನಾಯಡೊಲೆ ಎಲ್ಲಿಯನ್ನು ಪ್ರವೇಶಿಸಿ, 9ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಅವನ್ನು ಬಿಡುತ್ತದೆ.

(5) ಕ್ಯಾಸಾಪುರದಿಂದ ದೊಡ್ಡ ಗಂಗವಾಡಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 2ನೆ ಮೈಲಿಯ 7ನೆ ಫರ್ಲಾಂ

ವಿಕ್ಯಾಸಾಪುರದ 60ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರವಾಗಿ ಹೋಗಿ, 22ನೆ ಮೈ ಲಿಗೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು 46ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವವನ್ನು ಪ್ರವೇಶಿಸುತ್ತದೆ. 1893

(6) ಕ್ಯಾಸಾಪುರದಿಂದ ಮಾಕಳಿಗೆ ಹೋಗುವ ಬಂಡಿದಾರಿ.—4 ಗಜ ಅಗಲವೂ ಮತ್ತು 2 ಮೈಲಿ ಉದ್ದವುಳ್ಳದ್ದು. ಪ್ಪ ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೂ ಮತ್ತು ವಾಯವ್ಯಕ್ಕೂ ಹೋಗಿ ಮಾಕಳಿ ಮದ 133ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(7) ದಾಸವಾರದಿಂದ ಮಾಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 2 ಮೈಲಿ ಉದ್ದವುಳ್ಳದ್ದು. ಜನರ, ಮಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ದಾಸವಾರದಿಂದ 117ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ ಮಾಕಳಿ ಗ್ರಾಮದ 146ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(8) ನಾಗವಾರದಿಂದ ಮಾಕಳಿಗೆ ಹೊಗುವ ಬಂಡೀದಾರಿ.—4 ಗಜ ಅಗಲವೂ 2 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 6ನೆ ಮೈಲಿಯ 7ನೆ ಫರ್ಲಾಂ ನಾಗವಾರದ 181ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಮಾಕಳಿ ಗ್ರಾಮದ ಎಲ್ಲೆಯನ್ನು ಪ್ರವೇಶಿಸುತ್ತದೆ.

(9) ಅಂಬಹಳ್ಳಿ ಬೊಡ್ಡಿಯಿಂದ ಎಚೆಕಡಕಲ್ಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 3 ಮೈಲಿ ಉದ್ದವು ಟ್ಟ—ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 10ನೆ ಮೈಲಿಯ 7ನೆ ಫರ್ಲಾಂ ಅಂಬಹಳ್ಳಿ ಬೊಡ್ಡಿಯ 20ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರವಾಗಿ ಹೋಗಿ, 14ನೆ ಲಿಯ 6ನೆ ಫರ್ಲಾಂಗಿನಲ್ಲಿ 34ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಎಲೆಕಡಕಲ್ಲ (ಹುಣಿಗಲ್ ತಾಲ್ಲೂಕು) ನ್ನು ಪ್ರವೇಶಿಸುತ್ತದೆ.

(10) ಹೊಸಹಳ್ಳಿ (ಮಾಕಳಿ) ಯಿಂದ ನಾಯಡೊಲೆಗೆ ಹೋಗುವ ಕಾಲುದಾರಿ (ಫಾರೆಸ್ಟಿನಲ್ಲಿ ಐದಾಗುತ್ತದೆ).—2 ಗಜ ಸಿವೂ $\frac{3}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಮಾಕಳಿ ಗ್ರಾ ದ 198ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವವಾಗಿ ಹೋಗಿ, 9ನೆ ಸರ್ವೆ ನಂಬ ರದಕ್ಷಿಣ ಪಾರ್ಶ್ವದಲ್ಲಿ ನಾಯಡೊಲೆಯನ್ನು ಪ್ರವೇಶಿಸುತ್ತದೆ.

ದೇವಸ್ಥಾನ.

ಹೆಸರು—ಕೃಷ್ಣದೇವರ ಬೆಟ್ಟ.

ಇರುವ ಸ್ಥಳ—ಇದು ಕ್ಯಾಸಾಪುರ, ದಾಸವಾರ ಮತ್ತು ಮಾಕಳಿ ಗ್ರಾಮಗಳ ಮಧ್ಯಪಲ್ಲಿದೆ.

ಈ ಕೆಳಗೆ ವಿವರಿಸಿರುವ ಮಾರ್ಗಗಳು ಬಿಡಲ್ಪಟ್ಟಿವೆ :—

(1) ಡಿವಾರ್ಕೇಷನ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗನಲ್ಲಿ ಕ್ಯಾಸಾಪುರದ 60ನೆ ಸರ್ವೆ ನಂಬರಿನ ಪಶ್ಚಿಮ ಪಾ ರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ $\frac{1}{4}$ ಮೈಲಿ ವರೆಗೆ ಹೋಗುವ ಕಾಲುದಾರಿ. ಇದು 4 ಅಡಿ ಅಗಲವುಳ್ಳ ದ್ದಾಗಿ ಜನರಿಗೆ ಮಾತ್ರ ಬಿಡಲ್ಪಟ್ಟಿದೆ.

(2) ಡಿವಾರ್ಕೇಷನ್ ಲೈನಿನ 2ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ದಾಸವಾರದ 104ನೆ ಸರ್ವೆ ನಂಬರಿನಿಂದ ಫಾರೆ ಸ್ಟಿಗೆ ಪ್ರವೇಶಿಸಿ, ಉತ್ತರಕ್ಕೆ 1 ಮೈಲಿಯ ವರೆಗೆ ಹೋಗುವ ಕಾಲುದಾರಿ. ಇದು 4 ಅಡಿ ಅಗಲ ಉಳ್ಳದ್ದಾಗಿ ಜನರಿಗೆ ಮಾತ್ರ ಬಿಡಲ್ಪಟ್ಟಿದೆ.

(3) ಮಾಕಳಿ ಗ್ರಾಮದ 139ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ, ದಕ್ಷಿಣ ಮಾರ್ಗವಾಗಿ ಫಾರೆಸ್ಟಿನಲ್ಲಿ ಹೋಗು ವ ಕಾಲುದಾರಿ.—ಇದು 4 ಅಡಿ ಅಗಲವುಳ್ಳದ್ದು ಮತ್ತು $\frac{1}{2}$ ಮೈಲಿ ಉದ್ದವಿದೆ. ಜನರ ಉಪಯೋಗಕ್ಕೆ ಮಾತ್ರ ಬಿಡಲ್ಪಟ್ಟಿದೆ.

ಜಲಾಶಯಗಳು.

(ಎ) ರಾಮಾನುಜೈಯ್ಯನ ಕಟ್ಟೆ.—ಇದು ಮಾಕಳಿ ಗ್ರಾಮದ ಸರಹದ್ದಿನ 139ನೆ ಸರ್ವೆ ನಂಬರಿನಿಂದ ಸುಮಾರು ಗಜ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರು ನಾಗವಾರ, ದಾಸವಾರ, ಮಾಕಳಿ ಮತ್ತು ಹೊಸಹಳ್ಳಿ, ಗ್ರಾಮಗಳ ಜಾ ವಾರುಗಳಿಂದ ಉಪಯೋಗಿಸಲ್ಪಡುತ್ತೆ.

(ಬಿ) ತ್ರಿನಿವಾಸಯ್ಯನ ಕಟ್ಟೆ.—ಇದು ಡಿವಾರ್ಕೇಷನ್ ಲೈನಿನ 4ನೆ ಮೈಲಿ ಕಲ್ಲಿನಿಂದ 1 ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ದಾಸವಾರ, ನಾಗವಾರ ಮತ್ತು ಕ್ಯಾಸಾಪುರ ಜಾನುವಾರುಗಳಿಂದ ಇದರ ನೀರು ಉಪಯೋಗಿಸಲ್ಪಡುತ್ತದೆ.

ಫಾರೆಸ್ಟನಲ್ಲಿರುವ ಗ್ರಾಮಗಳು.

(1) ಹೊಸಹಳ್ಳಿ, (2) ನಾಯಿಹೊಲೆ ದಾಖಲೆಗಳಿಂದೊಡಗೂಡಿದ ಮೂಕಳಿ ಗ್ರಾಮ. ಇವರ ಸುತ್ತಲೂ 6 ಅಡಿ ಅಗಲವುಳ್ಳ ಗ್ರೇಜಿಂಗ್ಲೈನ್ ಉಳ್ಳದ್ದಾಗಿದೆ.

ಹುಲ್ಲೂರು ಫಾರೆಸ್ಟು ಕ್ಲೋಸ್‌ಪೇಟೆ ಸಬ್ ತಾಲ್ಲೂಕು.

(1) ಕೆಂಚನಕುಪ್ಪೆಯಿಂದ ಲಕ್ಕಸಂದ್ರಕ್ಕೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 18ನೆ ಮೈಲಿಯು 7ನೆ ಫರ್ಲಾಂಗಿನಲ್ಲಿ ಕೆಂಚನಕುಪ್ಪೆಯ 127ನೆ ಸರ್ವೆ ನಂಬರಿನ ಪಶ್ಚಿಮಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯ ಮಾರ್ಗವಾಗಿ ಹೋಗಿ, 4ನೆ ಮೈಲಿಯು 2ನೆ ಫರ್ಲಾಂಗಿನಲ್ಲಿ, ಫಾರೆಸ್ಟನ್ನು ಬಿಟ್ಟು ಲಕ್ಕಸಂದ್ರದ 36ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಕಾಕರಾಮನಹಳ್ಳಿಯಿಂದ ಗುಡ್ಡದಹಳ್ಳಿಗೆ ಹೋಗುವ ಬಂಡಿದಾರಿ.—4 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1೮ನೆ ಮೈಲಿಯು 7ನೆ ಫರ್ಲಾಂಗಿನಲ್ಲಿ, ಕಾಕರಾಮನಹಳ್ಳಿಯ 6ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯಕ್ಕೂ ಮತ್ತು ದಕ್ಷಿಣಕ್ಕೂ ಹೋಗಿ, 13ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಹಾಗಲಹಳ್ಳಿಯ 106ನೆ ಸರ್ವೆ ನಂಬರಿನ ಪೂರ್ವಪಾರ್ಶ್ವವನ್ನು ಪ್ರವೇಶಿಸುತ್ತದೆ.

(3) ಗಾಣಕಲ್ಲಿನಿಂದ ಹಾಗಲಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 15ನೆ ಮೈಲಿಯು 1ನೆ ಫರ್ಲಾಂಗಿನಲ್ಲಿ 17ನೆ ಸರ್ವೆ ನಂಬರಿನ ಪಶ್ಚಿಮಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಮೇಲೆ ಹೇಳಿದ 2ನೆ ನಂಬರಿನ ಬಂಡಿದಾರಿಯಲ್ಲಿ ಬೈದಾಗುತ್ತದೆ.

VI ಕುಂಬಳಗೋಡ ರಿಜರ್ವ್.

(1) ಮೂಡನಾಯಕನಹಳ್ಳಿಯಿಂದ ಬನ್ನಿಕುಪ್ಪೆಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 2 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಬನ್ನಿಕುಪ್ಪೆಯ 97ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, 3ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಬನ್ನಿಕುಪ್ಪೆಯ 93ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಕುರುಬರ ಕರೇನಹಳ್ಳಿಯಿಂದ ಕನ್ನಿನಿಕೆಗೆ (ಕಾಯಂಗುತ್ತಾ) ಹೋಗುವ ಬಂಡೀದಾರಿ.— 4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕುರುಬರ ಕರೇನಹಳ್ಳಿಯ 34ನೆ ಸರ್ವೆ ನಂಬರಿನ ಪೂರ್ವಕ್ಕೆ 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯಕ್ಕೆ ಹೋಗಿ, 10ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು (ಬೆಂಗಳೂರು ತಾಲ್ಲೂಕು) ಕಾಯಂಗುತ್ತಾ ಕನ್ನಿಸಿಕೆ ಗ್ರಾಮದ ಜಮೀನನ್ನು ಪ್ರವೇಶಿಸುತ್ತದೆ

(3) ಕಾಯಂಗುತ್ತಾ ಚಿಕ್ಕ ಕಲ್ಲೂರಿನಿಂದ ಹೆಜ್ಜಾಲಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 1¼ ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕಾಯಂಗುತ್ತಾ ಚಿಕ್ಕ ಕಲ್ಲೂರು ಜಮೀನಿಂದ ಡಿಮಾರ್ಕೇಷನ್ ಲೈನಿನ 9ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಹೆಜ್ಜಾಲ ಗ್ರಾಮದ 3ನೆ ಸರ್ವೆ ನಂಬರಿನ ಉತ್ತರಕ್ಕೆ ಡಿಮಾರ್ಕೇಷನ್ ಲೈನಿನ 11ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

VII ಹಂದಿಗುಂದಿ ಫಾರೆಸ್ಟು.

(1) ಹುಣಸಿನಹಳ್ಳಿಯಿಂದ ತುಂಬೀನಹಳ್ಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ½ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ತಮ್ಮನಾಯಕನಹಳ್ಳಿಯ 1೮ನೆ ಸರ್ವೆ ನಂಬರಿನ ಈಶಾನ್ಯಕ್ಕೆ ಡಿಮಾರ್ಕೇಷನ್ ಲೈನಿನ 2೫ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಒನ್ನೀಯವಾಗಿ ಹೋಗಿ, ತುಂಬೀನಹಳ್ಳಿಯ (ಹೆಬ್ಬುಕೋಡು ದಾಖಲು) 45ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಊರಗಹಳ್ಳಿಯಿಂದ ಹೆಬ್ಬುಕೋಡಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಊರಗಹಳ್ಳಿಯ ಈಶಾನ್ಯದಿಂದ ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 2ನೆ ಸರ್ವೆ ನಂಬರಿನ ಪೂರ್ವಕ್ಕೆ ಹೆಬ್ಬುಕೋಡು ಗ್ರಾಮವನ್ನು ಪ್ರವೇಶಿಸುತ್ತದೆ.

(3) ಮಂಚೇಗೌಡನ ಪಾಳ್ಯದಿಂದ ಹೆಬ್ಬಕ್ಕೋಡಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{3}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಮಂಚೇಗೌಡನ ಪಾಳ್ಯದ 88ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 10ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಸ್ಟೇಟ್ ಫಾರೆಸ್ಟ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, ಹೆಬ್ಬಕ್ಕೋಡು ಗ್ರಾಮದ 48ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವದಲ್ಲಿ ಫಾರೆಸ್ಟ್ಟನ್ನು ಬಿಡುತ್ತದೆ. 1895

(4) ಅಣ್ಣಹಳ್ಳಿಯಿಂದ ಹುಲ್ಕೆರೆ ಗುನ್ನೂರಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $3\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಅಂಣಹಳ್ಳಿ ಗ್ರಾಮದ 28ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 11ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೂ ಮತ್ತು ಆಗ್ನೇಯಕ್ಕೂ ಹೋಗಿ, ಹುಲ್ಕೆರೆ-ಗುನ್ನೂರಿನ 18ನೆ ಸರ್ವೆ ನಂಬರಿನ ಈಶಾನ್ಯಕ್ಕೆ 19ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಬಿಡುತ್ತದೆ.

(5) ಬಿಳಗುಳಿಯಿಂದ ಹುಲ್ಕೆರೆ-ಗುನ್ನೂರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ $1\frac{1}{2}$ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಬಿಳಗುಳಿಯ 10ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 16ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಪ್ರವೇಶಿಸಿ, ವಾಯವ್ಯಕ್ಕೆ ಹೋಗಿ, ಹುಲ್ಕೆರೆ-ಗುನ್ನೂರಿನ 18ನೆ ಸರ್ವೆ ನಂಬರಿನ ಆಗ್ನೇಯಕ್ಕೆ 18ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಬಿಡುತ್ತದೆ.

(6) ಕೇತೋಹಳ್ಳಿಯಿಂದ ಉರಗಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕೇತೋಹಳ್ಳಿಯ 61ನೆ ಸರ್ವೆ ನಂಬರಿನ ದಕ್ಷಿಣಕ್ಕೆ ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಪ್ರವೇಶಿಸಿ, ಆಗ್ನೇಯಕ್ಕೆ ಹೋಗಿ, 7ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟ್ಟನ್ನು ಬಿಟ್ಟು ಉರಗಹಳ್ಳಿಯ ಕಾಯಂ ಗುತ್ತಾ ಜಮೀನನ್ನು ಪ್ರವೇಶಿಸುತ್ತದೆ.

ಜಲಾಶಯಗಳು.

(1) ಬಾಳಿಕೆರೆ.—14ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಡಿಮಾರ್ಕೇಷನ್ ಲೈನಿನಿಂದ 1 ಫರ್ಲಾಂಗು ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರನ್ನು ಕೋಟಕಲ್, ಪಿಚ್ಚಕೆರೆ ಮತ್ತು ಕಲ್ಲಬಾಳು ಗ್ರಾಮಗಳ ಜಾನುವಾರುಗಳು ಉಪಯೋಗಿಸುತ್ತವೆ.

(2) ಕಣುವೆ ಹನುಮಂತರಾಯನ ಕಟ್ಟೆ.—ಇದು ಡಿಮಾರ್ಕೇಷನ್ ಲೈನಿನ 15ನೆ ಮೈಲಿ ಕಲ್ಲಿನ ಹತ್ತರ ಫಾರೆಸ್ಟಿನಲ್ಲಿದೆ. ಅಂಗಾರನಹಳ್ಳಿ, ಬಿಳಗುಳಿ ಮತ್ತು ಕೋಟಕಲ್ ಗ್ರಾಮದ ಜಾನುವಾರುಗಳು ಇದರ ನೀರನ್ನು ಉಪಯೋಗಿಸುತ್ತವೆ.

(3) ಈರಬಂಡೆಗೌಡನಕೆರೆ.—ಇದು ಡಿಮಾರ್ಕೇಷನ್ ಲೈನಿನ 18ನೆ ಮೈಲಿಯಲ್ಲಿ ಫಾರೆಸ್ಟಿನಲ್ಲಿದೆ. ಹುಲ್ಕೆರೆ-ಗುನ್ನೂರು, ಈರೇಗೌಡನದೊಡ್ಡಿ ಮತ್ತು ಸಿಂಗಸಂದ್ರದ ಜಾನುವಾರುಗಳು ಇದರ ನೀರನ್ನು ಉಪಯೋಗಿಸುತ್ತವೆ.

(4) ಲಿಂಗೆಗೌಡನಕಟ್ಟೆ.—ಹೆಬ್ಬಕ್ಕೋಡು ಮತ್ತು ಅಂಣಹಳ್ಳಿಗಳ ನಡುವೆ ಹಂದಿಗೊಂದಿ ಫಾರೆಸ್ಟಿನ ಮಧ್ಯದಲ್ಲಿದೆ. ಅಂಣಹಳ್ಳಿ, ಬನ್ನಹಳ್ಳಿ, ಮಂಚೆಗೌಡನಪಾಳ್ಯ, ಹುಚವಜ್ಜನ ದೊಡ್ಡಿ ಮತ್ತು ಹೆಬ್ಬಕ್ಕೋಡು ಗ್ರಾಮಗಳ ಜಾನುವಾರುಗಳು ಇದರ ನೀರಿಗಾಗಿ ಬರುತ್ತವೆ.

(5) ಬಕ್ಕಸಿದ್ದೇಗೌಡನಕೆರೆ ಅಥವಾ ಹೊಸಕೆರೆ.—ಇದು ಡಿಮಾರ್ಕೇಷನ್ ಲೈನಿನ 13ನೆ ಮೈಲಿಯ 3ನೆ ಫರ್ಲಾಂಗಿನ ಹತ್ತರ ಫಾರೆಸ್ಟಿನಲ್ಲಿದೆ. ಅಣ್ಣಹಳ್ಳಿ ಮತ್ತು ಪಿಚನಕೆರೆ ಜಾನುವಾರುಗಳು ಇದರ ನೀರನ್ನು ಕುಡಿಯುತ್ತವೆ.

ಫಾರೆಸ್ಟಿನಲ್ಲಿರುವ ಗ್ರಾಮಗಳು.

(1) ತುಂಬೇನಹಳ್ಳಿಯಿಂದೊಡಗೂಡಿದ ಹೆಬ್ಬಕ್ಕೋಡು.—ಇದು ಸ್ಟೇಟ್ ಫಾರೆಸ್ಟಿನಲ್ಲಿದ್ದು, ಇದರ ಸುತ್ತಲೂ 6 ಅಡಿ ಅಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

(2) ಕೆಂಚೇಗೌಡನಹಳ್ಳಿ ಸೈಲು (ಕೇತೋಹಳ್ಳಿ ದಾಖಲೆ).—ಇದು ಸ್ಟೇಟ್ ಫಾರೆಸ್ಟಿನಲ್ಲಿದ್ದು ಇದರ ಸುತ್ತಲೂ 7 ಗಜ ದಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

VIII ಅಚಲ್ ಫಾರೆಸ್ಟು.

(1) ಅಚಲ್‌ನಿಂದ ವಿಭೂತಿಕೆರೆಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 5ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಅಚಲ್ ಗ್ರಾಮದ 60ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 2ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ವಿಭೂತಿಕೆರೆ ಗ್ರಾಮದ 156ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಸೇರುತ್ತದೆ.

IX ತೆಂಗಿನಕಲ್ಲು ಫಾರೆಸ್ಟು.

(1) ಮಲ್ಲಂಗೆರೆಯಿಂದ ಚಾಗರೆಗೆ ಹೋಗುವ ಕಾಲುದಾರಿ.—2 ಗಜ ಅಗಲವೂ 3 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 24ನೆ ಮೈಲುಕಲ್ಲಿನ ಹತ್ತರ ಮಲ್ಲಂಗೆರೆಯ 6ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಚಾಗರೆ (ಸಿಂಗರಾಜಪುರದಾಖಲೆ)ಯ 18ನೆ ಸರ್ವೆ ನಂಬರಿನ ಉತ್ತರಕ್ಕೆ 6ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ಹೊಸದೊಡ್ಡಿಯಿಂದ ತೆಂಗಿನ ಕಲ್ಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 5 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಿಲ್ಕೋರ್ಪೇಷ್ ಲೈನಿನ 28ನೆ ಮೈಲಿಯ 5ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಕಾಡನಕುಪ್ಪೆಯ 43ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯವಾಗಿ ಹೋಗಿ, ತೆಂಗಿನಕಲ್ ಗ್ರಾಮದ 42ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಕಾಡನಕುಪ್ಪೆಯ ಹೊಸದೊಡ್ಡಿಯಿಂದ ಅಳ್ಳಾಳಸಂದ್ರಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 21ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಹೊಸ ದೊಡ್ಡಿಯ 43ನೆ ಸರ್ವೆ ನಂಬರಿನ ದಕ್ಷಿಣದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯಕ್ಕೆ ಹೋಗಿ, ಅಳ್ಳಾಳಸಂದ್ರದ 12ನೆ ಸರ್ವೆ ನಂಬರಿನ ಈಶಾನ್ಯಕ್ಕೆ 9ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಅಮ್ಮಣ್ಣಿಪುರದಿಂದ ತೆಂಗಿನಕಲ್ಲಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಅಮ್ಮಣ್ಣಿಪುರದ 1ನೆ ಸರ್ವೆ ನಂಬರಿನ ದಕ್ಷಿಣಕ್ಕೆ, 19ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯಕ್ಕೆ ಹೋಗಿ, ತೆಂಗಿನಕಲ್ಲಿನ 42ನೆ ಸರ್ವೆ ನಂಬರಿನ ಉತ್ತರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ವೆಣಸಿನ ಹಳ್ಳಿಯಿಂದ ಬೆಲಿಕೊತ್ತನೂರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 4 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 11ನೆ ಮೈಲಿಯ 7ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ದೂರದಲ್ಲಿ ವೆಣಸಿನ ಹಳ್ಳಿಯ 62ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವಕ್ಕೆ ಹೋಗಿ, ಬೆಲಿಕೊತ್ತನೂರಿನ 23ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವವನ್ನು ಸೇರುತ್ತದೆ.

(6) ಮುರಕಣಿಯಿಂದ ಬೆಲಿಕೊತ್ತನೂರಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 19ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಮುರಕಣಿ (ಕಾನಕಾನಹಳ್ಳಿ ತಾಲ್ಲೂಕು) ಯ 101ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 23ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಬೆಲಿಕೊತ್ತನೂರನ್ನು ಪ್ರವೇಶಿಸುತ್ತದೆ.

ಫಾರೆಸ್ಟಿನಲ್ಲಿರುವ ಗ್ರಾಮಗಳು.

1 ತೆಂಗಿನಕಲ್, (2) ಬೆಲಿಕೊತ್ತನೂರು.—ಇವು ಮುಂದಕ್ಕೊಂದು ಸೇರಿಕೊಂಡಿವೆ. ಇವುಗಳ ಸುತ್ತಲೂ, ಇವುಗಳನ್ನು ಸ್ಟೇಟ್ ಫಾರೆಸ್ಟಿನಿಂದ ಬೇರ್ಪಡಿಸುವ 7 ಗಜದ ಅಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

X ಮುದಗೆರೆ ಪ್ಲಾಂಟೇಷನ್.

(ಎ) ಮುದಗೆರೆ ಬ್ಲಾಕ್.

(1) ಬಿಳಿಕೆರೆಯಿಂದ ಮುದಗೆರೆಗೆ ಹೋಗುವ ಬಂಡೀದಾರಿ (ಬೆಂಗಳೂರು-ಮೈಸೂರು ಮೇಜ್ ರೋಡಿನ).—4 ಗಜ ಅಗಲವೂ 100 ಗಜ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಬಿಳಿಕೆರೆಯ 1ನೆ ಸರ್ವೆ ನಂಬರಿನ ಉತ್ತರದಲ್ಲಿ ಪ್ಲಾಂಟೇಷನ್ನು ಪ್ರವೇಶಿಸಿ, ಉತ್ತರಕ್ಕೆ ಹೋಗಿ 42ನೆ ಮೈಲಿಯ 7ನೆ ಫರ್ಲಾಂಗ್ ಕಲ್ಲಿನಿಂದ 9 ಗಜಗಳ ದೂರದಲ್ಲಿ ಮೇಜ್ ರೋಡಿಗೆ ಸೇರುತ್ತದೆ.

(ಬಿ) ಕಾಡುಕೊತ್ತನಹಳ್ಳಿ ಬ್ಲಾಕ್.

(2) ಮುದಗೆರೆಯಿಂದ ನೂಲೇರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 5 ಫರ್ಲಾಂಗು 19 ಗಜಗಳ ಉದ್ದವೂ ಇರುತ್ತದ. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕಾಡುಕೊತ್ತನಹಳ್ಳಿಯ 2ನೆ ಸರ್ವೇ ನಂಬರಿನ ದಕ್ಷಿಣದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, 72ನೆ ಸರ್ವೇ ನಂಬರಿನ ಉತ್ತರ ಪಾರ್ಶ್ವದಲ್ಲಿ ಪ್ಲಾಂಟೇಷನ್ನು ಬಿಡುತ್ತದೆ.

ಸೂಚನೆ :—ಈ ಎರಡು ಬಂಡೀದಾರಿಗಳು ಉಭಯಪಾರ್ಶ್ವಗಳಲ್ಲೂ ಕಂದಾಳಿಯನ್ನು ನಾಟಿ ಗುರ್ತು ಮಾಡಲ್ಪಟ್ಟಿವೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ.

ತಾರೀಖು 6ನೆ ಡಿಸೆಂಬರು 1904ನೆ ಇಸವಿ. ಸ 1897

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ – 1904—05ನೆ ಸಾಲಿನಲ್ಲಿ ಬೆಂಕಿ ಅಪಾಯ ನಿವಾರಣೆ ಬಗ್ಯೆ ಕೆಲವು ಫಾರೆಸ್ಟುಗಳಲ್ಲಿ ಬೀಟೆ, ಷಿಕಾರಿ ವಗ್ಯೆರೆ ಕೆಲಸಗಳು ಮಾಡದಂತೆ ಬಂದು ವಜಾಡಿರುವದಾಗಿ ಪ್ರಕಟನೆ ಮಾಡಿರುವ ವಿಷಯದಲ್ಲಿ 1904ನೆ ಡಿಸೆಂಬರು 15ನೆ ಮಾರ್ಕ್ಯಂ ಮೈಸೂರು ಗೆಜೆಟಿನ 2ನೆ ಭಾಗದ 670ನೆ ಪುಟವನ್ನು ನೋಡತಕ್ಕದ್ದು.

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 1ನೆ ಡಿಸೆಂಬರು 1904ನೆ ಇಸವಿ.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರವಾಗಿ ತಾ॥ ಅಮಲ್ದಾರ್ರ ಕಛೇರಿಯಲ್ಲಿ 1905ನೆ ಇಸವಿ ಜನವರಿ ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಪಾರ್ಥಗಾನಹಳ್ಳಿ. | 2. ಜೋಡಿ ಚಿಕ್ಕನಹಳ್ಳಿ. | 3. ಜೋಡಿ ಕೂತಾಂಡಹಳ್ಳಿ.

(ಹೆಚ್ಚ್ಯು ತಪಶೀಲ್ ಬಗ್ಯೆ 1904ನೆ ಮಾರ್ಕ್ಯಂ 49ನೆ ನಂಬರ್.ಮೈಸೂರ ಗೆಜೆಟಿನ 2ನೆ ಭಾಗದ 671—672—673ನೆ ನಂಬರು ಪೇಜು ನೋಡತಕ್ಕದ್ದು.)

ತಾರೀಖು 6ನೆ ಡಿಸೆಂಬರ 1904ನೆ ಇಸವಿ.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ ಮುದವತ್ತಿ ಆಗ್ರಿಕಲ್ಚರಲ್ ಬ್ಯಾಂಕಿನ ಮೆಂಬರುಗಳ ಬಾಬತು ಕೆಲವು ಹಿಡುವಳಿ ಜವಿನುಗಳು, ಅವರಿಂದ ಸರ್ಕಾರಕ್ಕೆ ಬರಬೇಕಾದ ಸಾಲದ ನೊಬಲಗು ಬಾಕೀಗೋಸ್ಕರವಾಗಿ 1905ನೆ ಇಸವಿ ಜನವರಿ ಮಾಹೆ 17ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚ್ಯು ತಪಶೀಲ್ ಬಗ್ಯೆ 1904ನೆ ಮಾರ್ಕ್ಯಂ 49ನೆ ನಂಬರಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 674—675—676 677—678—679—680 – 681ನೆ ನಂಬರು ಪೇಜು ನೋಡತಕ್ಕದ್ದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

ತಾರೀಖು 22ನೆ ನವಂಬರ 1904.

1903—1904ನೆ ಸಾಲು ಆಖ್ಯೆರು ವರಿಗೆ ಸರ್ಕಾರಕ್ಕೆ ಬರಬೇಕಾದ ಕಂದಾಯ ಬಾಕೀಗಾಗಿ ತೀರ್ಥಹಳ್ಳಿ ತಾಲ್ಲೂಕು ಮಂಡಗದ್ದೆ ಹೋಬಳಿ ಹೆಗಲತ್ತಿ ಜೋಡಿ ಗ್ರಾಮವು 1905ನೆ ಜನವರಿ 4ನೆ ತಾರೀಖಿನ ದಿವಸ ಶಿವಮೊಗ್ಗ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮಿಷನರ್ ಸಾಹೆಬರವರಿಂದ ಹರಾಜು ಮಾಡಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಶೀಲುಗಳ ಬಗ್ಯೆ 1904ನೆ ಇಸವಿ ಡಿಸೆಂಬರ್ 15ನೆ ತಾರೀಖು ಮೈಸೂರು ಗೆಜೆಟ್ಟಿನಲ್ಲಿ ಪ್ರಯಿಸಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಎಸ್. ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.